# ಗಣಪತಿ ಅನುದಾನಿತ ಪದವಿಪೂರ್ವ ಮಹಾವಿದ್ಯಾಲಯ,
# ಮಂಗಳೂರು – 575 001. ದ.ಕ

## 2022-23ನೇ ಸಾಲಿನ ವಾರ್ಷಿಕ ವರದಿ

ಗಣಪತಿ ಅನುದಾನಿತ ಪದವಿಪೂರ್ವ ಕಾಲೇಜಿನ 50ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿರುವ, ದ.ಕ. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ಶ್ರೀ ಸಿದ್ಧಲಿಂಗೇಶ ಬೇವಿನಮಟ್ಟಿಯವರೇ ನಮ್ಮ ಆಡಳಿತ ಮಂಡಳಿ ಸಾರಸ್ವತ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹಾಗೂ ಸಂಚಾಲಕರಾದ ಶ್ರೀ ಮಹೇಶ್ ಬೊಂಡಾಲ್‌ರವರೇ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಪ್ರಶಾಂತ್ ರಾವ್‌ರವರೇ, ರಕ್ಷಕ–ಉಪನ್ಯಾಸಕ ಸಂಘದ ಅಧ್ಯಕ್ಷರಾದ ಶ್ರೀ ನಾರಾಯಣ ಉಚ್ಚಿಲ್‌ರವರೇ, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಕು. ವೈಷ್ಣವಿ ಶೆಟ್ಟಿಯವರೇ, ಗಣಪತಿ ಆಂಗ್ಲ ಮಾಧ್ಯಮ ಶಾಲಾ ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ವೀಣಾ ಗಂಗೊಳ್ಳಿಯವರೇ, ಎಲ್ಲಾ ಹೆತ್ತವರೇ ಸಹೋದ್ಯೋಗಿ ಬಂಧುಗಳೇ, ನಿವೃತ್ತ ಬಂಧುಗಳೇ, ಹಿತೈಷಿಗಳೇ ಹಾಗೂ ಪ್ರೀತಿಯ ವಿದ್ಯಾರ್ಥಿಗಳೇ ತಮಗೆಲ್ಲರಿಗೂ ಆತ್ಮೀಯ ನಮಸ್ಕಾರ ತಿಳಿಸುತ್ತಾ 2022–23ನೇ ಸಾಲಿನ ಸಂಕ್ಷಿಪ್ತ ಶೈಕ್ಷಣಿಕ ವರದಿಯನ್ನು ನಿಮ್ಮ ಮುಂದಿಡಲು ಹರ್ಷ ಪಡುತ್ತಿದ್ದೇನೆ

ನಮ್ಮ ಕಾಲೇಜು 1870ರ ಗಣಪತಿ ಪ್ರೌಢ ಶಾಲೆಯ ಶೈಕ್ಷಣಿಕ ಇತಿಹಾಸವನ್ನು ಆಧರಿಸಿಕೊಂಡು 1972ರಲ್ಲಿ ಆರಂಭವಾಯಿತು. 2022ರ ಈ ಅವಧಿಗೆ ಸುಮಾರು 50 ವರ್ಷಗಳಿಂದ ಈ ಪರಿಸರದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಾ ಮುನ್ನಡೆಯುತ್ತಿದೆ. ಈ 2022–23ರ ಶೈಕ್ಷಣಿಕ ವರ್ಷ ಕಾಲೇಜು 50 ವರ್ಷ ಪೂರ್ಣಗೊಳಿಸಿದ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ವರ್ಷ ಆಚರಿಸುತ್ತಿದ್ದು, ಇದರ ಕಾರ್ಯ ಚಟುವಟಿಕೆಗಳನ್ನು ಆಡಳಿತ ಮಂಡಳಿ ಜೊತೆ ಸೇರಿ ನಡೆಸಲಿದ್ದೇವೆ. ಅದಕ್ಕೂ ತಾವೆಲ್ಲರೂ ಬಂದು ತನುಮನ ಧನ ಸಹಾಯ ನೀಡಿ, ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಡುವಂತೆ ಈ ಮೂಲಕ ವಿಜ್ಞಾಪಿಸುತ್ತಿದ್ದೇನೆ.

**<u>ನಮ್ಮ ವಿದ್ಯಾರ್ಥಿಗಳು</u>:** 2022–23ರ ಸಾಲಿನಲ್ಲಿ ನಮ್ಮ ಕಾಲೇಜಿನಲ್ಲಿ ಒಟ್ಟು 220 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 189 ಹುಡುಗರು ಮತ್ತು 31 ಹುಡುಗಿಯರು ಕಲಾ ಮತ್ತು ವಾಣಿಜ್ಯ ವಿಭಾಗಗಳಲ್ಲಿ ವ್ಯಾಸಾಂಗ ಮಾಡುತ್ತಿದ್ದಾರೆ. ಇದರಲ್ಲಿ ಹಾಸ್ಟೆಲ್‌ನಿಂದ 6 ವಿದ್ಯಾರ್ಥಿಗಳು, ರೈಲು ಪಾಸ್ ಪಡೆದು ಬರುವ 11 ವಿದ್ಯಾರ್ಥಿಗಳು, ಕೆ.ಎಸ್.ಆರ್.ಟಿ.ಸಿ ಪಾಸ್ ಪಡೆದು ಬರುವ 7 ವಿದ್ಯಾರ್ಥಿಗಳು, ಹಾಗೂ ಇತರ ವಿದ್ಯಾರ್ಥಿಗಳು ಬಹಳ ಉತ್ಸಾಹದಿಂದ ಆಗಮಿಸಿ ಶೈಕ್ಷಣಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸುತ್ತೇನೆ.

**<u>ವಿದ್ಯಾರ್ಥಿಗಳ ಫಲಿತಾಂಶ</u>:** ಕಳೆದ 2022ರ ಮಾರ್ಚ್ ಪರೀಕ್ಷೆಯಲ್ಲಿ ಕಾಲೇಜಿಗೆ 74% ಫಲಿತಾಂಶ ಬಂದಿರುತ್ತದೆ. ಇದರಲ್ಲಿ ವಾಣಿಜ್ಯ ವಿಭಾಗದ ಧನ್‌ರಾಜ್ ವೈ ಗಟ್ಟಿ 600 ರಲ್ಲಿ 564, ವೀರಣ್ಣ 556 ಹಾಗೂ ಪ್ರಿಯಾಂಕ 550 ಅಂಕಗಳೊಂದಿಗೆ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಹಾಗೆ ಕಲಾ ವಿಭಾಗದಲ್ಲಿ ಸುನಿಲ್, ಯಲ್ಲಪ್ಪ ಅಭಿಲಾಷ್ ಅತೀ ಹೆಚ್ಚು ಅಂಕಗಳೊಂದಿಗೆ ಪಾಸಾಗಿದ್ದಾರೆ. ಹೀಗೆ ಪ್ರಥಮ ಸ್ಥಾನದಲ್ಲಿ 52, ದ್ವಿತೀಯ ಸ್ಥಾನದಲ್ಲಿ 20, ತೃತೀಯ ಸ್ಥಾನದಲ್ಲಿ 28 ವಿದ್ಯಾರ್ಥಿಗಳು ತೇರ್ಗಡೆಯಾಗಿರುವುದಕ್ಕೆ ಇವರೆಲ್ಲರಿಗೂ ನಮ್ಮ ಅಭಿನಂದನೆಗಳು.

**<u>ನೌಕರ ವರ್ಗ</u>:** ಕಾಲೇಜಿನಲ್ಲಿ ಪ್ರಸಕ್ತ 18 ಮಂದಿ ನೌಕರರು ಕರ್ತವ್ಯ ಸಲ್ಲಿಸುತ್ತಿದ್ದಾರೆ. ಇವರಲ್ಲಿ 10 ಮಂದಿ ಅನುದಾನಿತ ಉಪನ್ಯಾಸಕರು ಹಾಗೂ 7 ಮಂದಿ ಆಡಳಿತ ಮಂಡಳಿ ನೌಕರರಾಗಿ ಹಾಗೂ ಒಬ್ಬರು ಶ್ರೀಮತಿ ಶ್ರೀಲತಾ, ಬೆಸೆಂಟ್ ಪದವಿಪೂರ್ವ ಕಾಲೇಜು ನಿಯೋಜನೆ ಮೇರೆಗೆ ವಾರದಲ್ಲಿ 3 ದಿನ ಕರ್ತವ್ಯ ಸಲ್ಲಿಸುತ್ತಿದ್ದಾರೆ. ನಮ್ಮ ರಾಜ್ಯಶಾಸ್ತ್ರ ಉಪನ್ಯಾಸಕ ಪುಟ್ಟಸ್ವಾಮಿ ಆರ್ ಮತ್ತು ಭೂಗೋಳಶಾಸ್ತ್ರ ಉಪನ್ಯಾಸ ಬಾಲಕೃಷ್ಣ ವಾರದಲ್ಲಿ ಮೂರುದಿನ ಬದ್ರಿಯಾ ಪದವಿಪೂರ್ವ ಕಾಲೇಜು ಮತ್ತು ಮದನಿ ಪದವಿಪೂರ್ವ ಕಾಲೇಜಿನಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ಸಲ್ಲಿಸುತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು.

**<u>ವಿದ್ಯಾರ್ಥಿವೇತನ</u>:-** ಕಳೆದ ವರ್ಷದ ಎಸ್.ಸಿ./ಎಸ್.ಟಿ ಸ್ಕಾಲರ್ ಬಾಬ್ತು ಸಮಾಜ ಕಲ್ಯಾಣ ಇಲಾಖೆಯಿಂದ ಒಟ್ಟು ರೂ. 61,317/– ಮೊತ್ತ ಬಂದಿದ್ದು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಬೀಡಿ ಸ್ಕಾಲರ್ ಶಿಫ್,

ಹಿಂದುಳಿದ ವರ್ಗದ ಸ್ಕಾಲರ್‌ಶಿಪ್, ಅಲ್ಪ ಸಂಖ್ಯಾತರ ಸ್ಕಾಲರ್‌ಶಿಪ್ ಮೊತ್ತ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ. ಈ ವರ್ಷದಲ್ಲಿ NSP ಮೂಲಕ ಬೀಡಿ ಸ್ಕಾಲರ್‌ಶಿಪ್‌ನ 15 ವಿದ್ಯಾರ್ಥಿಗಳು ಹಾಗೂ ಮೈನಾರಿಟಿ ಸ್ಕಾಲರ್‌ಶಿಫ್‌ಗೆ 3 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ. BCM/SC/ST ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ಗೆ ಅರ್ಜಿ ಹಾಕಲು 31/12/2022 ಕೊನೆಯ ದಿನಾಂಕವಾಗಿದ್ದು ಅರ್ಜಿ ಸಲ್ಲಿಕೆ ಚಾಲ್ತಿಯಲ್ಲಿದೆ. ಇಲಾಖೆಗಳು ಈ ಎಲ್ಲಾ ವಿದ್ಯಾರ್ಥಿಗಳಿಗೆ ನೇರ ಹಣ ವರ್ಗಾವಣೆ ಮಾಡಿ ಅವರ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಸಹಕರಿಸುವಂತೆ ಕೋರುತ್ತಾ ಸಂಬಂಧಪಟ್ಟ ಎಲ್ಲಾ ಇಲಾಖೆಗೆ ನಮ್ಮ ಕೃತಜ್ಞತೆಗಳು.

**ವಿದ್ಯಾರ್ಥಿ ಸಂಘ:** ಈ ವರ್ಷದ ವಿದ್ಯಾರ್ಥಿ ಸಂಘದಲ್ಲಿ 22 ಮಂದಿ ಸದಸ್ಯರಿದ್ದು ವೈಷ್ಣವಿ ಶೆಟ್ಟಿ ಅಧ್ಯಕ್ಷರಾಗಿ, ಸಿದ್ದಾರ್ಥ ವಿದ್ಯಾರ್ಥಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಿರಿಯ ಇತಿಹಾಸ ಉಪನ್ಯಾಸಕ ಶ್ರೀ ರಾಮಚಂದ್ರ ನಾಯ್ಕ್ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದ್ರೀ ಸಂಘದ ಆಶ್ರಯದಲ್ಲಿ ಲಲಿತಕಲಾ ಸಂಘ, ಕಲಾ ಸಂಘ, ಕ್ರೀಡಾಸಂಘ, ಸಾಹಿತ್ಯ ಸಂಘ, ಎನ್.ಎಸ್.ಎಸ್., ರೋವರ್ ರೇಂಜರ್, ವಾಣಿಜ್ಯ ಸಂಘ, ಕನ್ನಡ ಸಂಘ ಬುಲೆಟಿನ್ ಸಂಘ ಕಾರ್ಯ ನಿರ್ವಹಿಸುತ್ತಿದ್ದು ಸಕಾಲಿಕ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ನಡೆಸುತ್ತಿರುವುದರಿಂದ ಎಲ್ಲಾ ಸಂಘದ ಸಂಚಾಲಕರಿಗೆ ನಮ್ಮ ವಂದನೆಗಳು.

**ರಕ್ಷಕ–ಉಪನ್ಯಾಸಕ ಸಂಘ:** - ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಚನೆಯಾಗಿರುವ ರಕ್ಷಕ ಉಪನ್ಯಾಸಕ ಸಂಘದ ಪ್ರಸ್ತುತ ಅಧ್ಯಕ್ಷರಾಗಿರುವ ಶ್ರೀ ನಾರಾಯಣ ಉಚ್ಚಿಲ್, ಉಪಾಧ್ಯಕ್ಷರಾಗಿ ಶ್ರೀಮತಿ ಅನ್ನಪೂರ್ಣರವರ ಮಾರ್ಗದರ್ಶನದಲ್ಲಿ – ಇತರ 8 ಮಂದಿ ಪೋಷಕ ಪ್ರತಿನಿಧಿಗಳಾಗಿ ಉಪನ್ಯಾಸಕರೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಘದ ವತಿಯಿಂದ ಈಗಾಗಲೇ ದ್ವಿತೀಯ ಪಿಯುಸಿಯಲ್ಲಿ ವಿಶೇಷ ಶ್ರೇಣಿಯಲ್ಲಿ ವಿದ್ಯಾರ್ಥಿಗಳಿಗೆ ರೂ. 45,000/– ಮೊತ್ತ ಪುರಸ್ಕಾರಧನ ನೀಡಲಾಗಿದೆ.

**ರಾಷ್ಟ್ರೀಯ ಸೇವಾ ಯೋಜನಾ ಘಟಕ:**– ಶಿಕ್ಷಣದ ಮೂಲಕ ಸೇವೆ, ಸೇವೆಯ ಮೂಲಕ ಶಿಕ್ಷಣಕ್ಕಾಗಿ 2001ರಿಂದ ಎನ್.ಎಸ್.ಎಸ್. ಘಟಕ ಅಸ್ತಿತ್ವದಲ್ಲಿದ್ದು 2013ರ ರಾಜ್ಯ ಪ್ರಶಸ್ತಿ ಗಳಿಸಿಕೊಂಡಿದೆ. ಈ ವರ್ಷದ ಎನ್.ಎಸ್.ಎಸ್.ನಲ್ಲಿ ಕಾರ್ಯಕ್ರಮಾಧಿಕಾರಿಯಾಗಿ ಶ್ರೀ ಚೇತನ್ ಕುಮಾರ್ ಕಾರ್ಯನಿರ್ವಹಿಸುತ್ತಿದ್ದಾರೆ. ಅದರಲ್ಲಿ 100 ಎನ್.ಎಸ್.ಎಸ್. ಸ್ವಯಂಸೇವಕರಿದ್ದು, ವಿದ್ಯಾರ್ಥಿ ಕಾರ್ಯದರ್ಶಿ ಸುದೀಪ್ ಮತ್ತು ಮೇಘನಾ ನಾಗರ್‌ಮಠ್ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ವರ್ಷ 55 ಸ್ವಯಂಸೇವಕರು ಸರಕಾರಿ ಪ್ರೌಢ ಶಾಲೆ ಮುಲ್ಲಕಾಡು ಎಂಬಲ್ಲಿ ದಿನಾಂಕ 27.09.2022 ರಿಂದ 03.10.2022 ರವರೆಗೆ 7 ದಿನ ನಡೆದ ವಾರ್ಷಿಕ ವಿಶೇಷ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಶಿಬಿರದ ಉದ್ಘಾಟನೆಗೆ ಡೆಪ್ಯುಟಿ ಮೇಯರ್ ಶ್ರೀಮತಿ ಪೂರ್ಣಿಮಾ, ಸ್ಥಳೀಯ ಕಾರ್ಪೊರೇಟರ್ ಶ್ರೀಮತಿ ಗಾಯತ್ರಿ ರಾವ್ ಹಾಗೂ ಇತರ ಪದಾಧಿಕಾರಿಗಳು ಬಂದು ಶಿಬಿರ ಯಶಸ್ವಿಗೊಳಿಸಿರುವುದಕ್ಕೆ ಸರ್ವರಿಗೂ ಮನದಾಳದ ಕೃತಜ್ಞತೆಗಳು

**ಇತರ ಚಟುವಟಿಕೆಗಳು:**

1. ದಿನಾಂಕ 21.07.2021ರಂದು ಕಾಲೇಜು ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ಮಿಲಾಗ್ರಿಸ್ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಶ್ರೀ ಜಾನ್ ಪಾಯಸ್‌ರವರಿಂದ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಶುಭ ಕೋರಿದರು.
2. ದಿನಾಂಕ 31.07.2022ರಂದು ವಿದ್ಯಾರ್ಥಿಯ ಪೋಷಕರಿಗೆ ಕೌನ್ಸಿಲರ್ ಶ್ರೀಮತಿ ರಾಧಾ ಭಟ್‌ರವರಿಂದ ಮಕ್ಕಳ ಶಿಕ್ಷಣದಲ್ಲಿ ಹೆತ್ತವರ ಜವಾಬ್ದಾರಿಗಳು ಎಂಬ ಬಗ್ಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.
3. ದಿನಾಂಕ 15.08.2022ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಡಳಿತ ಮಂಡಳಿ ಹಾಗೂ ಆಂಗ್ಲ ಮಾಧ್ಯಮ ಶಾಲಾ ಸಂಯುಕ್ತ ಆಶ್ರಯದಲ್ಲಿ ನೆರವೇರಿಸಲಾಯಿತು.
4. ದಿನಾಂಕ 22.08.2022ರಂದು ಟ್ರಾಫಿಕ್ ರೂಲ್ಸ್ ಬಗ್ಗೆ ಟ್ರಾಫಿಕ್ ಪೋಲೀಸ್ ಇಲಾಖೆ ಪಾಂಡೇಶ್ವರ ಇವರಿಂದ ಮಾಹಿತಿ ನೀಡಲಾಯಿತು.

5. ದಿನಾಂಕ 05.09.2022ರಂದು ಶಿಕ್ಷಕರ ದಿನಾಚರಣೆಯಂದು ಎಲ್ಲಾ ವಿದ್ಯಾರ್ಥಿಗಳು ನಮ್ಮ ಕಾಲೇಜಿನ ಎಲ್ಲಾ ಶಿಕ್ಷಕರಿಗೆ ಹಾಗೂ ಸಿಬ್ಬಂದಿಯವರಿಗೆ ಗೌರವ ವಂದನೆ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು.
6. ಕರ್ನಾಟಕ ಲೋಕಾಯುಕ್ತ ಪೋಲೀಸ್ ವತಿಯಿಂದ ಬ್ರಷ್ಟಾಚಾರ ವಿರೋಧಿ ಸಪ್ತಾಹ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗೆ ನೆರವೇರಿಸಲಾಗಿತ್ತು.
7. ಭಾರತೀಯ ಬಾಲವಿಕಾಸ ಆರೋಗ್ಯ ಸಂಸ್ಥೆ (RBSK) ವತಿಯಿಂದ ಕಬ್ಬಿನಾಂಶ ಮಾತ್ರೆ ಎಲ್ಲಾ ವಿದ್ಯಾರ್ಥಿಗಳಿಗೆ ವಿತರಿಸಲಾಗಿತ್ತು. ಹಾಗೂ ಎಲ್ಲಾ ಮಕ್ಕಳಿಗೆ ಮೆಡಿಕಲ್ ಚಕ್‌ಅಪ್ ಮಾಡಲಾಗಿದೆ.
8. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಹಮ್ಮಿಕೊಂಡ ಹರ್‌ಘರ್ ತಿರಂಗ ಕಾರ್ಯಕ್ರಮವನ್ನು ನಮ್ಮ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ರಾಷ್ಟ್ರ ಧ್ವಜ ನೀಡಿ 3 ದಿನ ಮನೆಮನೆಯಲ್ಲಿ ಹಾಗೂ ಕಾಲೇಜಿನಲ್ಲಿ ಹಾರಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲಾಗಿತ್ತು.
9. ಓಣಂ ಹಬ್ಬದ ಪ್ರಯುಕ್ತ ವಿದ್ಯಾರ್ಥಿಗಳಿಂದ ಪೂಕಳಂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.
10. ದಿನಾಂಕ 12.09.2022ರಂದು ಮಂಗಳೂರು ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಖೋ ಖೋ ಪಂದ್ಯಾಟವನ್ನು ನಮ್ಮ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.
11. ಯೆನಪೊಯ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಅಧಿಕಾರಿ ಆಗಿರುವ ಶ್ರೀ ನಿಯಾಝ್‌ರವರು 2022–23ರ ಸಾಲಿನ ಎನ್.ಎಸ್.ಎಸ್. ದೈನಂದಿನ ಚಟುವಟಿಕೆಯನ್ನು ದಿನಾಂಕ 15.09.2022ರಂದು ಉದ್ಘಾಟಿಸಿದರು.
12. ದಿನಾಂಕ 28.10.2022ರಂದು ಕೋಟಿ ಕಂಠ ಗಾಯನ ಕಾರ್ಯಕ್ರಮ ಆಯೋಜಿಸಲಾಗಿತ್ತು.
13. ಜೆ.ಸಿ.ಐ ಮಂಗಳೂರು ವತಿಯಿಂದ ನಮ್ಮ ವಿದ್ಯಾರ್ಥಿಗಳು ಸಂಗೀತ ಮತ್ತು ನೃತ್ಯ ಕಾರ್ಯಕ್ರಮದಲ್ಲಿ ಪುರಭವನದಲ್ಲಿ ಭಾಗವಹಿಸಿರುತ್ತಾರೆ.
14. ನಮ್ಮ ವಿದ್ಯಾರ್ಥಿಗಳಾದ ವಿಶಾಖ್ ಚಿಕ್ಕಮಗಳೂರುನಲ್ಲಿ ನಡೆದ ರಾಜ್ಯ ಮಟ್ಟದ ಟೆನ್ನಿಕಾಯಿಟ್‌ನಲ್ಲಿ ಭಾಗವಹಿಸಿರುತ್ತಾರೆ. ನಮ್ಮ ಕಾಲೇಜಿನ ಟೆನ್ನಿಕಾಯಿಟ್ ತಂಡ ಸುಬ್ರಹ್ಮಣ್ಯದಲ್ಲಿ ನಡೆದ ನವಂಬರ್ 4ರಂದು ನಡೆದ ಜಿಲ್ಲಾ ಮಟ್ಟದ ಟೆನ್ನಿಕಾಯಿಟ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಕಾಲೇಜಿನ ಬಲಭೀಮಣ್ಣ ತಾಲೂಕು ಮಟ್ಟದ 5 ಕಿಲೋ ಮೀಟರ್ ನಡಿಗೆ ಮತ್ತು ರಂಜಿತ್ ತಾಲೂಕು ಮಟ್ಟದ 5000 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.
15. ಪವನ್ ಮತ್ತು ಸುದೀಪ್‌ರವರು ಜಿಲ್ಲಾ ಮಟ್ಟದ ಸಂವಿಧಾನ ರಸಪ್ರಶ್ನೆಯಲ್ಲಿ ಜಿಲ್ಲಾ ಪಂಚಾಯತ್ ನೇತ್ರಾವತಿ ಸಭಾಂಗಣದಲ್ಲಿ ಪಾಲ್ಗೊಂಡಿದ್ದಾರೆ. ಭಾಗವಹಿಸಿದ ಮತ್ತು ಪ್ರಶಸ್ತಿ ಗಳಿಸಿದ ನಮ್ಮೆಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.
16. ನಮ್ಮ ಕಾಲೇಜಿನ ಮೇಲಿನ ಅಭಿಮಾನದಿಂದ ಚಾರ್ಟೆಡ್ ಅಕೌಂಟೆಂಟ್ ಶ್ರೀ ಸುರೇಶ್ ಕುಮಾರ್ ಅವರು, ರೂ. 4,020/– ಮೊತ್ತವನ್ನು ಇತಿಹಾಸ ಮತ್ತು ಅಕೌಂಟೆನ್ಸಿಯಲ್ಲಿ ಹೆಚ್ಚು ಅಂಕ ಪಡೆದವರಿಗೆ ಬಹುಮಾನವಾಗಿ ಈ ವರ್ಷ ನೀಡಿದ್ದು, ಅವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು.
17. ಈ ವರ್ಷದ ಕ್ರೀಡಾಕೂಟವನ್ನು ದಿನಾಂಕ 23.12.2022ರಂದು ಮಂಗಳೂರು ಪೊಲೀಸ್ ಪೆರೇಡ್ ಮೈದಾನದಲ್ಲಿ ನಡೆಸಲಾಗಿದ್ದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಚೀಫ್ ಮೆನೇಜರ್ ಶ್ರೀಮತಿ ವಿನಂತಿ ಪೈಯವರು ಕ್ರೀಡಾಕೂಟ ಉದ್ಘಾಟಿಸಿದ್ದರು. ಈ ಕ್ರೀಡಾಕೂಟದಲ್ಲಿ ದ್ವಿತೀಯ ಪಿಯುಸಿಯ ಅಭಿಶೇಕ್ ಮತ್ತು ಪ್ರಥಮ ಪಿಯುಸಿಯ ದಿಶಾ ಚಾಂಪಿಯನ್‌ಶಿಪ್ ಗಳಿಸಿರುವುದಕ್ಕೆ ಅವರಿಗೂ ನಮ್ಮ ಅಭಿನಂದನೆಗಳು.

**ಕೃತಜ್ಞತೆಗಳು**:– ನಮ್ಮ ಮೇಲಿನ ಅಭಿಮಾನದಿಂದ ನಮ್ಮ ಕರೆಯನ್ನು ಮನ್ನಿಸಿ ಬಂದಿರುವ ಸಮಾಜ ಕಲ್ಯಾಣಾಧಿಕಾರಿ ಶ್ರೀ ಸಿದ್ಧಲಿಂಗೇಶ್ ಬೇವಿನಮಟ್ಟಿಯವರಿಗೆ ಮನದಾಳದ ಕೃತಜ್ಞತೆಗಳು. ನಮ್ಮ ಆಡಳಿತ

ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಎಲ್ಲಾ ಪದಾಧಿಕಾರಿ ಮತ್ತು ಸಿಬ್ಬಂದಿಗಳವರಿಗೆ ನಮ್ಮ ಕೃತಜ್ಞತೆಗಳು. ಆಂಗ್ಲ ಮಾಧ್ಯಮ ಶಾಲಾ ಮುಖ್ಯೋಪಾಧ್ಯಾಯಿನಿ ವೀಣಾ ಗಂಗೋಳ್ಳಿ, ಅವರ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಪ್ರೀತಿಯ ಕೃತಜ್ಞತೆಗಳು.

ಕಾಲೇಜಿನ ಮೇಲೆ ಗೌರವವಿಟ್ಟು ಸೇವೆಗೆ ಬದ್ಧರಾಗಿ ಸಹಕರಿಸುವ ಪೋಲೀಸ್ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆಗೆ, ಮ.ನ.ಪಾ. ಸ್ಥಳೀಯ ಕಾರ್ಪೋರೇಟರ್ ಶ್ರೀಮತಿ ಪೂರ್ಣಿಮಾರಿಗೆ, ತಾರಾಕ್ಲಿನಿಕ್ ವೈಧ್ಯಾಧಿಕಾರಿ ಮತ್ತು ಸಿಬ್ಬಂದಿಯವರಿಗೂ ಕಾಲೇಜಿನ ಪರವಾಗಿ ಹೃದಯ ಪೂರ್ವಕ ಕೃತಜ್ಞತೆಗಳು.

ಕೊನೆಯದಾಗಿ ಎಲ್ಲರೂ ತಮ್ಮ ಕೆಲಸವನ್ನು ಶೃದ್ಧೆಯಿಂದ ಮಾಡುವಂತಾಗಲಿ, ಭವಿಷ್ಯದಲ್ಲಿ ನೆಮ್ಮದಿಯ ಜೀವನ ಸಾಗಿಸುವಂತಾಗಲಿ, ದೈನಂದಿನ ಬದುಕಿನಲ್ಲಿ ಎಲ್ಲಿಯಾದರೂ ವಿಫಲರಾದರೆ ವಿಚಲಿತರಾಗದಿರಿ. ವಿಚಲತೆಗೆ ಕಾರಣ ಹುಡುಕಿ ಸಫಲತೆಯೆಡೆಗೆ ಸಾಗಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ ಶುಭ ಹಾರೈಸುತ್ತೇನೆ.

ಧನ್ಯವಾದಗಳು

**ರತ್ನಾಕರ ಬನ್ನಾಡಿ**

**ಪ್ರಾಂಶುಪಾಲರು**